MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 21-12-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಪೂರೈಕೆಯ ಕಳವಳದಿಂದ ಮಲೇಶೀಯನ್ ಪಾಮೆಣ್ಣೆ ದರ ಹೆಚ್ಚಳ**

ಒಂದು ವಾರದ ಕನಿಷ್ಠ ಮಟ್ಟದ ದರದಿಂದ ಮಲೇಶೀಯನ್ ಪಾಮೆಣ್ಣೆ ದರ ಮತ್ತೆ ಹೆಚ್ಚಳವಾಗಿದೆ. ಮಳೆ ಹಾಗೂ ನೆರೆ ಹೆಚ್ಚಳದಿಂದ ಉತ್ಪಾದನೆ ಇಳಿಕೆಯ ಸಾಧ್ಯತೆಯಿಂದ ಮುಂದೆ ಪೂರೈಕೆ ಇಳಿಕೆಯ ಕಳವಳದಿಂದ ದಿನಾರ್ಥದ ಅವಧಿಗೆ ಮಲೇಶಿಯನ್ ಪಾಮೆಣ್ಣೆ ಮಾರ್ಚ ಫ್ಯೂಚರ್ ದರ 1.84 ಶೇಕಡಾ ಹೆಚ್ಚಳವಾಗಿ ಟನ್‌ಗೆ 3940 ರಿಂಗಿಟ್ಸ್ ($ 888.19) ಆಗಿದೆ. ಚಿಕಾಗೋ ಸೋಯಾಬೀನ್ ಎಣ್ಣೆ ದರ ಸ್ವಲ್ಪ ಇಳಿಕೆಯಾಗಿದೆ.

**ಟಾಂಜಾನಿಯಾದಲ್ಲಿ ಈ ವರ್ಷ (2022–23) 4 ಲಕ್ಷ ಟನ್ ಕಚ್ಚಾ ಗೋಡಂಬಿ ಉತ್ಪಾದನೆಯಾಗುವ ನಿರೀಕ್ಷೆ**

ಟಾಂಜಾನಿಯಾದ ಗೋಡಂಬಿ ಉತ್ಪಾದನೆ ಮಂಡಳಿ ಈ ವರ್ಷ ಅಲ್ಲಿ 4 ಲಕ್ಷ ಟನ್ ಗೋಡಂಬಿ ಉತ್ಪಾದನೆಯಾಗುವ ಅಂದಾಜು ಮಾಡಿದೆ. ಅಕ್ಟೋಬರ್‌ನಿಂದ ಆರಂಭವಾದ ಈ ಸೀಸನ್‌ನಲ್ಲಿ ಇದುವರೆಗೆ 89,658.73 ಟನ್ ಕಚ್ಚಾ ಗೋಡಂಬಿ ಮಾರಾಟವಾಗಿದೆಯೆನ್ನಲಾಗಿದೆ. ಆಫ್ರಿಕಾದ ರಾಷ್ಟ್ರಗಳಲ್ಲಿ ಒಟ್ಟು 2.3 ಮಿಲಿಯನ್ ಟನ್ ಕಚ್ಚಾ ಗೋಡಂಬಿ ಉತ್ಪಾದನೆಯಾಗುತ್ತಿದೆಯೆನ್ನಲಾಗಿದೆ.

**29.7 ಮಿಲಿಯನ್ ಟನ್ ಮಟ್ಟದ ಅಕ್ಕಿ ಖರೀದಿ**

ಡಿಸೆಂಬರ್ 19 ರ ತನಕ ಅಕ್ಕಿ ಖರೀದಿ 29.71 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ. ಹಿಂದಿನ ವರ್ಷ ಈ ಅವಧಿಯಲ್ಲಿನ ಖರೀದಿ 26.73 ಮಿಲಿಯನ್ ಟನ್‌ಗಳಾಗಿತ್ತೆನ್ನಲಾಗಿದೆ.